ಓ ಎಸ್ ನಂ. 25/2017

ಪಿ ಡಬ್ಲ್ಯೂ: 1

ದಿನಾಂಕ 22-09-2021 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ: ಶ್ರೀ ಎಸ್ ಎನ್ ಜಿ ವಕೀಲರಿಂದ:

ಮುಸ್ರಪ್ ಅಹಮ್ಮದ್ ಇವರಿಗೆ ಮಾರಾಟ ಮಾಡಿದ ಆಸ್ತಿಯು ನನ್ನ ಊರಿನಲ್ಲಿ ಆದ ಪಂಚಾಯಿತಿಯಲ್ಲಿ ನನ್ನ ಪಾಲಿಗೆ ಬಂದ 20 ಗುಂಟೆ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಿಭಾಗವಾಗಿಲ್ಲ ಎಂದು ನುಡಿದಿರುತ್ತಾರೆ. 20 ಗುಂಟೆ ಆಸ್ತಿ ಮಾರಾಟ ಮಾಡಿರುವುದಕ್ಕೆ ನನ್ನ ಒಪ್ಪಿಗೆ ಇರುತ್ತದೆ. ಉಳಿದ ಜಮೀನುಗಳನ್ನು ವಿಭಾಗ ಮಾಡಿಕೊಳ್ಳೋಣ ಈ 20 ಗುಂಟೆ ಜಮೀನು ಮಾರಾಟ ಮಾಡೋಣ ಎಂದು ಹೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ. ನಂತರ ವಿಭಾಗವಾಗಿರುವುದಿಲ್ಲ. 1 ಎಕರೆ 30 ಗುಂಟೆಜಮೀನು ಮಾರಾಟ ಮಾಡಿರುವುದು ಸರಿ ಇಲ್ಲ ಎಂದು ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ. ನಾನು ಉರ್ದು ಭಾಷೆಯಲ್ಲಿ ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ.

1993-94 ರಲ್ಲಿ ಹಾಕಿದ ಕೇಸಿನ ದಾಖಲಾತಿಗಳನ್ನು ತೆಗೆದುಕೊಂಡು ಈ ಕೇಸಿನಲ್ಲಿ ನಿಮಗೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಯಾವುದೇ ತೊಂದರೆ ಇಲ್ಲ ಹಾಜರುಪಡಿಸುತ್ತೇನೆ ಎಂದು ನುಡಿದಿರುತ್ತಾರೆ. ಪಂಚಾಯಿತಿದಾರರ ಸಮಕ್ಷಮ ನಾನು ಮತ್ತು ನನ್ನ ಅಣ್ಣ ಜುಬಾನೆ ಹಿಸ್ಸೆ ಮಾಡಿಕೊಂಡು ಅದರಂತೆ ನನಗೆ 20 ಗುಂಟೆ ಜಮೀನು ಮತ್ತು 10 ಸಾವಿರ ರೂ ನಗದನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ನನಗೆ ಬಂದಿದ್ದ 20 ಗುಂಟೆ ಜಮೀನನ್ನು ನಾನು ಮಸ್ರಪ್ ಅಹಮ್ಮದ್ ರವರಿಗೆ ಮಾರಾಟ ಮಾಡಿ ಬಂದ ಹಣವನ್ನು ನಾನೇ ಇಟ್ಟುಕೊಂಡಿದ್ದೇನೆ ಎಂದರೆ

ಸರಿಯಲ್ಲ. ಆ ಉದ್ದೇಶದಿಂದಲೇ ನಾನು ಮುಸ್ರಫ್ ಅಹಮ್ಮದ್ ರವರಿಗೆ ಮಾಡಿಕೊಟ್ಟ ಕ್ರಯಪತ್ರವನ್ನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಹಿಸ್ಸೆ ಇಲ್ಲದೆ ಇದ್ದರೂ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ನಮೂದು ಮಾಡಿರುವಷ್ಟು ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ದಾವಾ ಆಸ್ತಿಗಳ ಚಕ್ಕುಬಂದಿಯನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.